ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕಿಂತ ಮುಂಚೆ ಮುಖ್ಯವಾದ ವಿಷಯ ಏನೆಂದರೆ ನಿನ್ನೆ ದಿವಸ ಜೂನಿಯರ್ ಕಾಲೇಜ್ ಲೆಕ್ಚರರ್ಸ್ ಏನಿದ್ದಾರೆ ಅವರು ಉರುಳು ಸೇವೆ ಮಾಡಿಕೊಂಡು.....

ಅಧ್ಯಕ್ಷರು.—ಆಮೇಲೆ ಕೇಳಿ.

ನಿಯಮ ೩೩ಳಿರ ಮೇರೆಗೆ (೧) ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅವರು ಎಂಟು ದಿನಗಳಿಂದ ಇಲ್ಲಿ ಅಡ್ಡಾಡುತ್ತಿದ್ದಾರೆ. ಇದು ೮೫೦ ಜನರ ಸಮಸ್ಯೆ ಇದೆ. ಅದಕ್ಕೆ ಸರ್ಕಾರ ಏನಾದರೂ ಪರಿಹಾರ ನೀಡಬೇಕು. ಅವರನ್ನು ಖಾಯಂ ಮಾಡಬೇಕು. ಮಾರ್ಚಿ ಕೊನೆಗೆ ಇವರುಗಳನ್ನು ಟರ್ಮಿನೇಟ್ ಮಾಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು,—ಮಾನ್ಯ ಮಂತ್ರಿಗಳು ಹೇಳಿಕೆ ನೀಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಈ ಬಗ್ಗೆ ಸೂಚನೆ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಿಮ್ಮ ಹೆಸರು ಬರುತ್ತದೆ. ತಾವು ಹೇಳಿದ್ದೀರಿ ಮಾನ್ಯ ಮಂತ್ರಿಗಳು ಈಗ ಉತ್ತರ ಹೇಳುತ್ತಾರೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ಶಿಕ್ಷಕರಿಗೆ ಗಾಬರಿ ಇತ್ತು. ಅವರನ್ನು ಏಪ್ರಿಲ್ ಹತ್ತಕ್ಕೆ ರಿಲೀವ್ ಮಾಡುತ್ತೇವೆಂದು. ನಿಯಮಾವಳಿ ಪ್ರಕಾರ ಪ್ರತಿ ವರ್ಷ ಅದೇ ರೀತಿ ಮಾಡುತ್ತಿದ್ದೆವು. ಮಾರ್ಚ್ ಕೊನೆಗೆ ರಿಲೀವ್ ಮಾಡಿ ಮತ್ತೆ ರಜ ಕಳೆದ ಮೇಲೆ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇತ್ತು.

ಆದರೆ ಈ ಸಾರಿ ಅವರನ್ನು ರಿಲೀವ್ ಮಾಡಕೂಡದು ಎಂದು ಆರ್ಡರ್ ಮಾಡಿದ್ದೇವೆ. ರಿಲೀವ್ ಮಾಡುವುದಿಲ್ಲ. ಅದರ ಜೊತೆಗೆ ಗುತ್ತಿಗೆ ಆಧಾರದ ಮೇಲೆ ಏನು ಕೆಲಸ ಮಾಡುತ್ತಿದ್ದಾರೆ ಅದನ್ನು ಖಾಯಂ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶಾಸನ ರಚನಾಕಾರ್ಯ ಕಲಾಪಗಳು

೧೯೮೭ನೇ ಇಸವಿಯ ಕರ್ನಾಟಕ ಮನರಂಜನೆ ತೆರಿಗೆ (೩ನೇ ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

೩-೦೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜುಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮನರಂಜನೆ ತೆರಿಗೆ (೩ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಚರ್ಚೆಯ ಮೇಲೆ ಭಾಗವಹಿಸಿ ಉತ್ತರ ಕೊಡುವಾಗ ಮತ್ತು ತದನಂತರ ಅನೇಕ ಮಸೂದೆಗಳ ಬಗ್ಗೆ ಚರ್ಚೆ ನಡೆಯುತಕ್ಕ ಸಮಯದಲ್ಲಿ ಕೆಲವು ರಿಯಾಯಿತಿಗಳನ್ನು ಘೋಷಿಸಿದ್ದರು. ಅದರ ಪೈಕಿ ಷೋ ಟ್ಯಾಕ್ಸ್ ರಿಯಾಯಿತಿಯೂ ಒಂದು. ಈಗ ವಿಧಿಸಲು ಉದ್ದೇಶಪಟ್ಟಿದ್ದ ೪ ಪರ್ಸೆಂಟ್ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು ತೆಗೆದುಹಾಕಿ ಅದರ ಬದಲು ಅವರೇ ಸೂಚಿಸಿರತಕ್ಕ ಷೋ ಟ್ಯಾಕ್ಸ್ ಹಾಕುತ್ತೇವೆಂದು ಈ ಸಭೆಯಲ್ಲಿ ಘೋಷಿಸಿದ್ದರು. ಅದರನುಸಾರವಾಗಿ ಈ ತಿದ್ದುಪಡಿಯನ್ನು ತಂದಿದ್ದೇವೆ.

ದಯಮಾಡಿ ಮಾನ್ಯ ಸಭೆ ಇದಕ್ಕೆ ಬೆಂಬಲ ಕೊಟ್ಟು ಪಾಸ್ ಮಾಡಿಕೊಡಬೇಕೆಂದು ವಂನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾವಯ್ಯ.—ಇದರಲ್ಲಿ ಕನ್‌ಸೇಷನ್ ಕೊಟ್ಟಿಲ್ಲ.

ಅಧ್ಯಕ್ಷರು.—ನೀವು ಮಾತನಾಡಿ. ನಿಮ್ಮದು ದೊಡ್ಡ ಪಕ್ಷ. ನಿಮಗೆ ಮೊದಲು ಅವಕಾಶ ಕೊಡುತ್ತೇನೆ. ಆಮೇಲೆ ಅವರಿಗೆ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ),—ಸನ್ಮಾನ್ಯ ಅಧ್ಯಕ್ಷರೆ, ಸಿನಿಮಾ ನೋಡುವವರಿಗೆ ತೆರಿಗೆ ಬೀಳಬಾರದು ಸಿನಿಮಾ ಥಿಯೇಟರ್ ಓನರ್ಸ್ ಈ ಟ್ಯಾಕ್ಸನ್ನು ಕೊಡಬೇಕು ಎಂಬ ಉದ್ದೇಶದಿಂದ ಷೋ ಟ್ಯಾಕ್ಸ್ ಹಾಕತಕ್ಕ ವಿಚಾರ ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಆ ದಿವಸ ಈ ಬಗ್ಗೆ ಹೇಳುವಾಗಲೇ ನಾನು ಆಕ್ಷೇಪಣೆ ಎತ್ತಿದ್ದೆ. ಈಗ ಈ ಷೋ ಟ್ಯಾಕ್ಸ್ ಪರಿಣಾಮ ಏನಾಗಿದೆ ದೆಂದರೆ ಈಗಾಗಲೇ ಬೆಂಗಳೂರು ನಗರದಲ್ಲಿ ಸಿನಿಮಾ ಥಿಯೇಟರ್‌ಗಳನ್ನೆಲ್ಲಾ ಏನೂ ಲಾಭ ಬರುವುದಿಲ್ಲ ಎಂದು ಒಡೆದುಹಾಕಂತಿದ್ದಾರೆ. ಈಗ ಈ ಷೋ ಟ್ಯಾಕ್ಸನ್ನು ಎಷ್ಟರಮಟ್ಟಿಗೆ ಏರಿಸಿದ್ದೀರೆಂದರೆ ೨೦ ರೂಪಾಯಿಯಿಂದ ೪೦ ರೂಪಾಯಿಗೆ ಅಂದರೆ ಡಬಲ್ ಮಾಡಿದ್ದೀರಿ. ಮತ್ತೊಂದು, ೩೦ ರೂಪಾಯಿಯಿಂದ ೬೦ ರೂಪಾಯಿಗೆ, ೫೦ ರೂಪಾಯಿಯಿಂದ ೧೦೦ ರೂಪಾಯಿಗೆ ಏರಿಸಿದ್ದೀರಿ. ಇದಕ್ಕೆ ನಿಮಗೆ ಒಪ್ಪಿಗೆ ಯಾರು ಕೊಟ್ಟಿದ್ದು ದು ಎಂಬುದು ಬೇಕು. ಫೀಚರ್ ಫಿಲಂ ಪ್ರೊಡ್ಯೂಸರ್ಸ್ ನಿಮಗೆ ಒಪ್ಪಿಗೆ ಕೊಟ್ಟಿದ್ದಾರೋ ಅಥವಾ ಥಿಯೇಟರ್ ಒನರ್ಸ್ ಒಪ್ಪಿಗೆ ಕೊಟ್ಟಿದ್ದಾರೋ ಎಂಬುದು ನಮಗೆ ಬೇಕು. ಇವತ್ತು ಫೀಚರ್ ಫಿಲಂ ಪ್ರೊಡ್ಯೂಸರ್ಸ್ ಅವರೇ ಈ ತೆರಿಗೆಯನ್ನು ಭರಿಸುವುದಕ್ಕೆ ತಯಾರಿದ್ದರೆ ಒಪ್ಪಿಗೆ ಕೊಟ್ಟಿದ್ದು ಸರಿ ಎಂದು ಹೇಳಬಹುದು. ಈ ಪ್ರೊಡ್ಯೂಸರ್ಸ್ ತಮ್ಮ ತೆರಿಗೆಯನ್ನು ತಪ್ಪಿಸಿ ಕೊಂಡು ಥಿಯೇಟರ್ ಓನರ್ಸ್ ತಲೆ ಮೇಲೆ ಹಾಕುವುದಕ್ಕೆ ಹೋದರೆ ಥಿಯೇಟರ್ ಇಂಡಸ್ಟ್ರಿ ಉಳಿಯ ಬೇಕೋ ಬೇಡವೊ ಎಂಬ ಪ್ರಶ್ನೆ ಬರುತ್ತದೆ. ಈಗಾಗಲೇ ಅವರು ಉಳಿದಿಲ್ಲ. ಒಂದು ಕಡೆ ವಿಡಿಯೋ ಮತ್ತೊಂದು ಕಡೆ ಟಿ. ವಿ. ಇನ್ನೊಂದು ಕಡೆ ಥಿಯೇಟರ್ಸ್ ಓನರ್ಸ್‌ಗೆ ಕಾಂಪ್ಲೆಕ್ಸ್ ಮಾಡಿ ಹೆಚ್ಚು ಲಾಭ ಗಳಿಸತಕ್ಕ ಆಸೆ, ದಾಹ. ಇದರಿಂದ ಫಿಲಂ ಇಂಡಸ್ಟ್ರಿ ಕ್ರಮೇಣ ನಾಶವಾಗತಕ್ಕ ಪರಿಸ್ಥಿತಿ ಬರ ಬಹುದು. ಇನತ್ತು ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಹಾಕುವುದಕ್ಕೆ ವಾತಾವರಣವೇ ಸರಿಯಿಲ್ಲ. ಫೀಚರ್ ಫಿಲಂ ಪ್ರೊಡ್ಯೂಸರ್ಸ್ ಇರಲಿ, ಥಿಯೇಟರ್ ಓನರ್ಸ್ ಇರಲಿ ಅಥವಾ ಸಿನಿಮಾ ನೋಡತಕ್ಕ ಜನರಿರಲಿ ಯಾವ ದೃಷ್ಟಿಯಿಂದಲೂ ಇದು ಸರಿಯಲ್ಲ. ಈ ಜನರನ್ನು ಹಿಂಸೆ ಮಾಡಿ ತೆರಿಗೆ ವಸೂಲು ಮಾಡತಕ್ಕ ಯಾವ ಕ್ರಮ ಇದೆ ಇದರಿಂದ ಸಿನಿಮಾ ಉದ್ಯಮಕ್ಕೆ ಸಂಪೂರ್ಣವಾಗಿ ದೊಡ್ಡ ಆಘಾತ ವಾಗುತ್ತದೆ. ಆದ್ದರಿಂದ ನಾನು ಇದನ್ನು ವಿರೋಧ ಮಾಡುತ್ತೇನೆ. ತೀವ್ರವಾಗಿ ಆಲೋಚನೆ ಮಾಡದ ಪ್ರೊಡ್ಯೂಸರ್ಸ್ ಮತ್ತು ಹಂಚಿಕೆದಾರರ ಜೊತೆಯಲ್ಲಿ ಒಡಂಬಡಿಕೆ ಮಾಡಿಕೊಂಡು ಸಿನಿಮಾ ಉದ್ಯಮವನ್ನು ನಾಶ ಮಾಡತಕ್ಕ ತಮ್ಮ ಕೆಲಸದಿಂದ ಥಿಯೇಟರ್ ಓನರ್ಸ್ ಇದೇ ಕಾರಣ ಇಟ್ಟು ಕೊಂಡು ಲಾಭದಾಯಕ ಅಲ್ಲ ಎಂದು ಥಿಯೇಟರುಗಳನ್ನು ಒಡೆದು ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟುತ್ತಾರೆ. ಆ ಕಾರಣದಿಂದ ಸಿನಿಮಾ ಇಂಡಸ್ಟ್ರಿಗೆ ವಿರೋಧವಾದ ಮಸೂದೆ ಇದು ಎಂದು ನಾನು ಹೇಳಬೇಕಾಗಿದೆ. ಫಿಲಂ ಇಂಡಸ್ಟ್ರಿ ಎಂದರೆ ಬರೀ ಪ್ರೊಡ್ಯೂಸರ್ಸ್ ಅಲ್ಲ. ಅಥವಾ ಹಂಚಿಕೆದಾರರು ಮಾತ್ರ ಅಲ್ಲ. ಅದರಲ್ಲಿ ಬೇರೆ ಬೇರೆ ಕ್ಷೇತ್ರದ ಜನ ಇರುತ್ತಾರೆ. ಅವರ ತೊಂದರೆಗಳನ್ನು ಸಂಕಷ್ಟಗಳನ್ನು ತಿಳಿದುಕೊಳ್ಳುವ ದಕ್ಕೆ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಮಾಹಿತಿ ಸರ್ಕಾರ ಕೊಡಬೇಕೆಂದು ಹೇಳಿ ಇದನ್ನು ವಿರೋಧ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಕೆ.ಎಚ್. ಶ್ರೀನಿವಾಸ್ (ಶಿವಮೊಗ್ಗ).— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ.....

ಶ್ರೀ ಕೆ.ಎಚ್. ಪಾಟೀಲ್.—ಇವತ್ತು ಮಾನ್ಯ ಮುಖ್ಯಮಂತ್ರಿಗಳು ವೈಟ್ ಡ್ರೆಸ್ ಹಾಕಿಕೊಂಡು ಬಂದಿದ್ದಾರೆ. ಹೊಸ ಕೊಡುಗೆಯನ್ನೇನಾದರೂ ಕೊಡುತ್ತಾರೋ;

ಶ್ರೀ ರಾಮಕೃಷ್ಣ ಹೆಗೆಡೆ.— ಏಕೆ? ಜಾಕೆಟ್ ಹಾಕಿಕೊಂಡಿಲ್ಲ ಅಷ್ಟೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ವೀರಪ್ಪ ಮೊಯ್ಲಿಯವರು ಹೇಳಿದಂತಹ ಒಂದೆರಡು ಮಾತುಗಳನ್ನು ಬೆಂಬಲಿಸುತ್ತಾ ಈ ಮಸೂದೆಗೆ ನನ್ನ ವಿರೋಧವನ್ನು ಸೂಚಿಸುವುದಕ್ಕೆ ಬಯಸುತ್ತೇನೆ. ವಿಷಯ ಇಷ್ಟೆ. ಸರ್ಕಾರ ಕೆಲವು ಕ್ಷೇತ್ರಗಳನ್ನು ಕೇವಲ ತನ್ನ ಆದಾಯವನು ಹೆಚ್ಚಿಸಿಕೊಳ್ಳುವು

ದಕ್ಕೋಸ್ಕರವಾಗಿಯೇ ವಿಂಗಡಿಸಿರುವ ಕ್ಷೇತ್ರ ಎನ್ನುವ ಭಾವನೆಯಿಂದ ವರ್ಷ ವರ್ಷ ಇಷ್ಟು ಇಷ್ಟು ದುಡ್ಡನ್ನು ಅವರಿಗೆ ವಿಧಿಸಿ ಅವರಿಂದ ಆ ಹಣವನ್ನು ದೋಚತಕ್ಕ ಮನೋಭಾವ ಸರ್ಕಾರಕ್ಕೆ ಇರುವಂತದ್ದು ಸರಿಯಾದಂತ ಮನೋಭಾವ ಅಲ್ಲ. ಒಂದು ಸಿನಿಮಾದಲ್ಲಿ ಎಷ್ಟು ಹಣವನ್ನು ತೆಗೆದು ಕೊಳ್ಳುವುದಕ್ಕೆ ಸಾಧ್ಯವೋ ಅಷ್ಟನ್ನೂ ತೆಗೆದುಕೊಳ್ಳುವಂತಹ ಯೋಚನೆ ಮಾಡಿದರೆ ಸಾಲದು. ಅಥವಾ ಸಿನಿಮಾದಲ್ಲಿ ವಿಶಾಲವಾಗಿರುತ್ತಾರೆನ್ನುವ ಜನರಿಂದ ತಾತ್ಕಾಲಿಕವಾಗಿ ಪರಿಹಾರವನ್ನು ನೀಡತಕ್ಕ, ಅಥವಾ ಆ ಜನರಿಂದ ಯಾವುದಾದರೂ ಒಂದು ಮನವಿ ಪತ್ರವನ್ನು ಸಲ್ಲಿಸಿದ ತಕ್ಷಣವೇ ಅವರ ಮೂಗಿಗೆ ತುಪ್ಪ ಸವರತಕ್ಕ ಅಥವಾ ಕೆಲವು ವಿನಾಯಿತಿಯನ್ನು ಪ್ರಕಟಣೆ ಮಾಡಿದರೆ ಇದರಿಂದ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ. ಸಿನಿಮಾವನ್ನೂ ಸರ್ಕಾರ ಎರಡು ದೃಷ್ಟಿಯಿಂದ ನೋಡಬೇಕಾಗುತ್ತದೆ. ಒಂದನೆಯದು ಸಿನಿಮಾ ಕೂಡ ಒಂದು ಕೈಗಾರಿಕೆ ಸಹಸ್ರಾರು ಜನರಿಗೆ ಅನ್ನ ಕೊಡತಕ್ಕ, ಉದ್ಯೋಗವನ್ನು ಕೊಡತಕ್ಕ ಒಂದು ಕೈಗಾರಿಕೆ. ಈ ಒಂದು ಕೈಗಾರಿಕೆ ದೃಢವಾಗಿ ಬೆಳೆಯುವ ರೀತಿಯಲ್ಲಿ ಹಾಗೂ ಈ ಒಂದು ಕೈಗಾರಿಕೆಯಲ್ಲಿ ಏನು ಬಂಡವಾಳವನ್ನು ತೊಡಗಿಸಿದ್ದಾರೆ, ಆ ಬಂಡವಾಳ ಸಾಳೆಯ ದಿವಸ ಬೇರೆ ವಿಭಾಗಕ್ಕೆ ಹೋಗದೇ ಇರುವ ರೀತಿಯಲ್ಲಿ ಆ ಕೈಗಾರಿಕೆಗಳನ್ನು ಸ್ಥಿರವಾಗಿ ಬೆಳೆಸತಕ್ಕ ದೃಷ್ಟಿಯಿಂದ ನೋಡಬೇಕು, ಸಿನಿಮಾ ಕ್ಷೇತ್ರ ಸಮಾಜದ ಮೇಲೆ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವ ಬೀರತಕ್ಕ ಒಂದು ಮಾಧ್ಯಮ, ನಾನಾ ರೀತಿಯ ಪರಿಣಾಮವನ್ನು ಬೀರತಕ್ಕ ಮಾಧ್ಯಮವಾಗಿರುವುದರಿಂದ, ಆ ದೃಷ್ಟಿಯಿಂದ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಈ ಮಾಧ್ಯಮದಿಂದ ಜನಗಳಿಗೆ ಯಾವ ರೀತಿಯ ಅನುಕೂಲವಾಗಬೇಕು? ಹೇಗೆ ತಿರುಗಬೇಕು, ಎಂತಹ ಸಿನಿಮಾ ತಯಾರಾಗಬೇಕು, ಅಂತಹ ಸಿನಿಮಾ ತಯಾರಾಗಬೇಕಾದರೆ, ಸರ್ಕಾರದ ತನ್ನ ನೀತಿ ಏನು ಅದನ್ನು ಸರ್ಕಾರ ಯಾವ ರೀತಿ ಪ್ರೋತ್ಸಾಹ ಕೊಡಬೇಕು? ಯಾವ ರೀತಿಯ ನಿಯಂತ್ರಣ ಇಡಬೇಕು? ಇದೆಲ್ಲಾ ಸರ್ಕಾರದ ಜವಾಬ್ದಾರಿ ಇದೆ. ಈಗಾಗಲೇ ೨-೩-೪ ಸಾರಿ ಈ ಬಗ್ಗೆ ನಾನು ಮಾತನಾಡಿದಾಗಲೆಲ್ಲಾ ಹೇಳಿದ್ದೇನೆ. ಆದರೆ ಅದನ್ನು ಮಾನ್ಯ ಮುಖ್ಯಮಂತ್ರಿಗಳೂ ಗಮನಕ್ಕೆ ತೆಗೆದು ಕೊಳ್ಳಲಿಲ್ಲ. ಸರ್ಕಾರದ ಪರವಾಗಿ ಉತ್ತರ ಕೊಟ್ಟಂತಹವರೂ ಅದರ ಬಗ್ಗೆ ಅವರ ಗಮನ ಹರಿಸಲಿಲ್ಲ. ಇನ್ನೂ ನಾನು ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದೇನೆ. ಸರ್ಕಾರಕ್ಕೆ ಚಲನಚಿತ್ರದ ಬಗ್ಗೆ ಒಟ್ಟಿನಲ್ಲಿ ಸಮಗ್ರವಾದ ನೀತಿ ಬೇಕು. ಚಲನಚಿತ್ರವನ್ನು ಕೈಗಾರಿಕೆಯನ್ನಾಗಿ ಮತ್ತು ಪ್ರಭಾವಿ ಮಾಧ್ಯಮವನ್ನಾಗಿ, ಜನೋಪಯೋಗಿಯಾಗುವ ರೀತಿಯಲ್ಲಿ. ಅದನ್ನು ಬೆಳೆಸತಕ್ಕ ಒಂದು ಸಮಗ್ರವಾದ ನೀತಿ ಬೇಕು, ಇದೂ ಒಂದು ಅದರ ಅವಿಭಾಜ್ಯ ಅಂಗ ತೆರಿಗೆ ಬರಲಿ, ಅಥವಾ ಪ್ರೋತ್ಸಾಹ ನೀತಿ ಬರಲಿ, ಅದರ ಬಗ್ಗೆ ನೀತಿ ನಿರೂಪಣೆಗಳು ಆದ ಮೇಲೆ ಅದರ ಬಗ್ಗೆ ನಾವು ವಿಶ್ಲೇಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಬದಲು ಸರ್ಕಾರ ಎರಡು ಕ್ಷೇತ್ರಗಳನ್ನು ಮಾತ್ರ ಗುರುತು ಮಾಡಿ ಕೊಂಡಿದ್ದಾರೆ. ಒಂದು ಹೆಂಡ-ಸಾರಾಯಿ ಕ್ಷೇತ್ರ. ಪ್ರತಿ ವರ್ಷವೂ ಅದರ ಮೇಲೆ ಇಂತಿಷ್ಟು ಪರ್ಸೆಂಟ್ ತೆರಿಗೆಯನ್ನು ಹಾಕತಕ್ಕದ್ದು ಅವರಿಂದ ಅಷ್ಟು ದುಡ್ಡನ್ನು ದೋಚತಕ್ಕದ್ದು. ಇನ್ನೊಂದು ಸಿನಿಮಾ. ಒಟ್ಟಿನಲ್ಲಿ ದುಡ್ಡು ಮಾಡತಕ್ಕದ್ದಕ್ಕೆ ಅಷ್ಟೇ ಸರ್ಕಾರದ ಜವಾಬ್ದಾರಿ ಇದೆಯೇ ಹೊರತು, ಈ ಎರಡು ಯೋಜನೆಗಳ ಬಗ್ಗೆ ಬೇರೆ ಏನೂ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ ಹೆಂಡದ ಮೇಲೆ ಪ್ರತಿವರ್ಷ ಇಂತಿಷ್ಟು ಪರ್ಸೆಂಟ್ ಎಂದು ತೆರಿಗೆಯನ್ನು ವಿಧಿಸುವುದು. ಅದರಿಂದ ಸರ್ಕಾರಕ್ಕೆ ದುಡ್ಡು ಬಂದರೆ ಸಾಕು ಎನ್ನತಕ್ಕಂತಹದ್ದು ಸರಿಯಾದುದಲ್ಲ ಇದರಿಂದ ಬಡವರ ಆರೋಗ್ಯದ ಮೇಲೆ ಇದು ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಅದರಿಂದ ಬಡವರ ಆರೋಗ್ಯ ಹಾಳಾಗಿ ಹೋದರೂ ಪರವಾಗಿಲ್ಲ, ಒಟ್ಟಿನಲ್ಲಿ ತೆರಿಗೆ ಬಂದರೆ ಸಾಕು. ಅದೇ ರೀತಿ ಸಿನಿಮಾದ ಬಗ್ಗೆ ಯೂ ಅಷ್ಟೇ, ಯಾವುದೋ ಸಿನಿಮಾ ಮಂದಿರದ ಮಾಲೀಕರು ಇದ್ದಾರೆ ಅವರನ್ನೇ ದೃಷ್ಟಿಯಲ್ಲಿಟ್ಟು ಕೊಂಡು ಇಂತಿಷ್ಟು ತೆರಿಗೆಯನ್ನು ಅವರಿಂದ ತೆಗೆದುಕೊಂಡು ಬಿಟ್ಟರೆ ಆಯಿತು ಎನ್ನುವ ದೃಷ್ಟಿಕೋನ ಸರ್ಕಾರಕ್ಕೆ ಏನು ಇದೆ ಅದು ಸರಿಯಾದುದಲ್ಲ. ಚಲನಚಿತ್ರದ ಬಗ್ಗೆ ಸಮಗ್ರವಾದ ನೀತಿಯನ್ನು ಸರ್ಕಾರ ರೂಪಿಸಬೇಕು. ಈ ಸದನದಲ್ಲಿ ಅದರ ಬಗ್ಗೆ ಚರ್ಚೆ ಮಾಡಬೇಕು. ಅಲ್ಲಿಯವರೆಗೆ ಈ ಮಸೂದೆಯನ್ನು ಏನು ತಂದಿದ್ದಾರೆ ಅದನ್ನು ಕೈಬಿಡಬೇಕೆಂದು ತಪ್ಪು ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಾ ಇದನ್ನು ವಿರೋಧ ಮಾಡುತ್ತಾ ಇಷ್ಟು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವೆಂಕಟರಾಮಯ್ಯ (ಮುಳಬಾಗಿಲು) ಮಾನ್ಯ ಅಧ್ಯಕ್ಷರೇ, ಚಲನಚಿತ್ರಗಳು ಜನತೆಗೆ ಬಹಳ ಮುಖ್ಯವಾಗಿ ಮನರಂಜನೆಯನ್ನು ಒದಗಿಸತಕ್ಕ ಉದ್ಯಮ ಎಂದು ಹೇಳಿದರೆ ತಪ್ಪಾಗಲಾರದು.

ಫಿಲಮ್ ಛೇಂಬರ್ಸ್‌ನವರು ಬಂದು ಆದೇನೋ ಆಲ್ಟರ್‌ನೇಟೀವ್ ಆಗಿ ಸಜೆಷನ್ ಕೊಟ್ಟಿದ್ದಾರೆ ಆದ್ದರಿಂದ ಇದನ್ನು ತಂದಿದ್ದೇವೆ ಎಂದೇನೋ ಇವರು ಹೇಳಿದರು,

> "For the words 'twenty rupees in the two places where they occur, the words' forty rupees' shall be substituted; for the words 'thirty rupees' in the two places where they occur. the words 'sixty rupees' shall be substituted; for the words 'fifty rupees in the two places where they occur, the words 'one hundred rupees' shall be substituted,"

ನಮ್ಮಲ್ಲಿ ೮೦೦ ಪರ್ಮನೆಂಟ್ ಹಾಗೂ ೭೦೦ ಸೆಮಿ ಪರ್ಮನೆಂಟ್ ಸಿನೆಮಾಗಳು ಉಂಟು. ಇವತ್ತಿನ ದಿವಸ ಸಿನೆಮಾ ಇಂಡಸ್ಟ್ರೀ ಏನಾಗಿದೆ ಎಂಬ ಬಗ್ಗೆ ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ನಗರದಲ್ಲಿ ಈಗಾಗಲೇ ೬ ಚಿತ್ರ ಮಂದಿರಗಳನ್ನು ನೆಲಸಮ ಮಾಡಿದ್ದು ಇನ್ನು ೧೦ ಚಿತ್ರಮಂದಿರಗಳನ್ನು ಒಡೆದು ಹಾಕುವವರಿದ್ದಾರೆ. ಸಿನೆಮಾ ಉದ್ಯಮವನ್ನು ಸರ್ವನಾಶ ಮಾಡ ತಕ್ಕದ್ದು ನ್ಯಾಯವಲ್ಲ. ಫಿಲಮ್ ಛೇಂಬರ್ಸ್‌ನವರಂ ಪ್ರಾಏಸ್ ಮಾಡಿದ್ದಾರೆಂದರೂ ಇವತ್ತು ಈ ತೆರಿಗೆಯನ್ನು ಸಿನೆಮಾ ನೋಡುವವರ ಮೇಲೆಯೇ ಹಾಕುತ್ತಾರೆಯೇ ಹೊರತಂ ಮ್ಯಾಲೀಕರು ಕೊಡುವುದಿಲ್ಲ. ಒಂದು ಕಡೆ ನೂರಕ್ಕೆ ೫೦ ಭಾಗ ವಂತ್ತು ಇನ್ನೊಂದು ಕಡೆ ೧೦೦ಕ್ಕೆ ೧೦೦ ಭಾಗ ಹೆಚ್ಚು ಮಾಡಿದ್ದೀರಿ. ಇದನ್ನು ಫಿಲಮ್ ಛೇಂಬರ್ಸ್‌ನವರೇ ಒಪ್ಪಿಕೊಂಡರೂ ಇವತ್ತು ಒಂದು ದಿವಸಕ್ಕೆ ಒಂದೊಂದು ಸಿನೆಮಾ ಮಂದಿರಕ್ಕೆ ೪೦೦ ರೂಪಾಯಿಗಳು ಆಗುತ್ತದೆ. ಇದು ಬಹಳ ಅನ್ಯಾಯ. ಸಿನೆಮಾ ನೋಡುವವರ ಮೇಲೆ ಇದು ಹೋಗುತ್ತದೆ. ಇದರಿಂದ ಬಡ ಜನರ ಮನರಂಜನಾ ಮಾಧ್ಯಮವನ್ನು ಪೊಟಕು ಮಾಡಿದಂತೆ ಆಗುತ್ತದೆ, ಇದರಿಂದ ಇವತ್ತು ತಾವು ಸಿನೆಮಾ ಇಂಡಸ್ಟ್ರೀಯನ್ನು ಸರ್ವನಾಶ ಮಾಡಂತಿದ್ದೀರಿ. ಸಿನೆಮಾದಲ್ಲಿ ಲಾಭ ಇದ್ದಿದ್ದರೆ ಯಾರೂ ಉಳಿಯುತ್ತಾ ಇರಲಿಲ್ಲ ಸ್ವಾಮಿ.

ಶ್ರೀ ಯಂ. ಭೂಪತಿ.— ಅಧ್ಯಕ್ಷರೇ, ಸಭೆಯಲ್ಲಿ ಅಲ್ಲಲ್ಲಿ ಗುಂಪು ಗುಂಪು ಚರ್ಚೆ ನಡೆಯುತ್ತಿದ್ದು ನಾವು ಯಾವ ಭಾಷಣವನ್ನು ಕೇಳಬೇಕೆಂದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕಾಗಿ ವಿನಂತಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಬಹುಶಃ ಇವತ್ತು ಕೆಲಸದ ದಿನವಾದ್ದರಿಂದ ಸದಸ್ಯರಂ ಮಂತ್ರಿಗಳ ಹತ್ತಿರ ಹೋಗಿ ತಮ್ಮ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವ ಬಗ್ಗೆ ಚರ್ಚೆ ಮಾಡುತ್ತಿದ್ದಾರೆಂದು ಕಾಣುತ್ತದೆ.

ಅಧ್ಯಕ್ಷರು.—ಸಭೆಯಲ್ಲಿ ಸದಸ್ಯರುಗಳು ಇಲ್ಲದಿದ್ದರೆ ಒಂದು ರೀತಿ ಹೇಳುತ್ತೀರಿ. ಈಗ ಸಭೆಯಲ್ಲಿ ಬಹುಶಃ ಎಲ್ಲಾ ಸದಸ್ಯರೂ ಇದ್ದಾರೆ. ಇದನ್ನು ನೋಡಿ ತಾವು ಸಂತೋಷ ಪಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂತೋಷ. ಆದರೆ ಈ ರೀತಿ ತಮ್ಮ ಸ್ವಂತ ಸ್ಥಳ ಬಿಟ್ಟು ಅಲ್ಲಲ್ಲಿ ಗುಂಪು ಗುಂಪಾಗಿ ಚರ್ಚೆ ನಡೆಸುವುದು ಸರಿಯೇ ?

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಲಕ್ಷ್ಮೀಸಾಗರ್ ಅವರು ಸಿಂಪಲ್ ಸಲ್ಯೂಷನ್ ಏನು ಹೇಳಿದರು ಎಂದರೆ ನಾವು ಈ ಬಗ್ಗೆ ಏನೂ ಮಾಡುವುದಕ್ಕಾಗುವದಿಲ್ಲ ಎಂದೂ Article 19 of the Constitution ಪ್ರಕಾರ ಯಾರು ಏನು ಬೇಕಾದರೂ ಮಾಡಬಹುದೆಂದು ಬ್ಯಾಂಕ್ ಆಗಿ ಪರ್ಮಿಷನ್ ಬೇರೆ ಕೊಟ್ಟಿದ್ದಾರೆ. ಮುಂದೆ ಶಿವಾಜಿ ಚಿತ್ರಮಂದಿರವನ್ನು ಹಾಗೂ ಸ್ಟೇಟ್ ಚಿತ್ರಮಂದಿರವನ್ನು ನೆಲಸಮ ಮಾಡುತ್ತಾರೆಂದು ಸುದ್ದಿ ಇದೆ. ಇದರಿಂದ ಸಿನೆಮಾ ಮಾಧ್ಯಮವೇ ಹಾಳಾಗುತ್ತದೆ. ೨೦ ರೂಪಾಯಿ ಇದ್ದುದನ್ನು ೪೦ ರೂಪಾಯಿಗಳಿಗೂ, ೪೦ ರೂಪಾಯಿ ಇರುವುದನ್ನು ೮೦ ರೂಪಾಯಿಗಳಿಗೂ ೫೦ ರೂಪಾಯಿ ಇರುವುದನ್ನು ೧೦೦ ರೂಪಾಯಿಗಳಿಗೂ ಮಾಡಿರುವುದು ಬಹಳ ಅನ್ಯಾಯ.

ಜನರಿಗೆ ಈ ರೀತಿ ಇನ್ನೊಂದು ಬರೆಯನ್ನು ಹಾಕಿರುವುದು ಸರಿಯಲ್ಲ. ನಮ್ಮ ಜನರಿಗೆ ಕಡಿಮೆ ದರದಲ್ಲಿ ಒಳ್ಳೆಯ ಮನರಂಜನೆಯನ್ನು ಕೊಡಬೇಕಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ತಿದ್ದುಪಡಿಯನ್ನು ವಾಪಸ್ಸು ಪಡೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಿನೆಮಾ ಮಾಧ್ಯಮಕ್ಕೆ ಹೆಚ್ಚಿನ ಹೊರೆ ಹೊರಿಸಿರತಕ್ಕ ಈ ಒಂದು ನೀತಿಯನ್ನು ವಿರೋಧಿಸಿ ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಸಾಮಾನ್ಯ ಜನರಿಗೆ ಮನರಂಜನೆ ಬಹಳ ಅಗತ್ಯ. ಅವರಿಗೆ ಬರತಕ್ಕ ವೇತನ ಬಹಳ ಕಡಿಮೆ. ಮನರಂಜನಾ ತೆರಿಗೆಯನ್ನು ಹೆಚ್ಚು ಮಾಡಿದ್ದು ಅವರು ಸಿನೆಮಾಕ್ಕೆ ಹೋಗಬೇಕೆಂದರೆ ೬ ರೂಪಾಯಿಗಳನ್ನು ಕೊಡಬೇಕು. ಇಂತಹ ಒಂದು ಪರಿಸ್ಥಿತಿ ಇದೆ. ಈಗ ಇರತಕ್ಕದ್ದು ಒಂದಕ್ಕೆ ಎರಡರಷ್ಟು ಹಾಕಿದರೆ ಅವರು ಅದನ್ನು ಜನರ ಮೇಲೆ ಹಾಕುತ್ತಾರೆ. ಇವತ್ತು ಶ್ರೀಮಂತರು ಸಿನೆಮಾ ನೋಡುವುದು ಬಹಳ ಕಡಿಮೆ. ಕಾರಣ ಅವರ ಮನೆಯಲ್ಲಿ ಟಿ. ವಿ , ವೀಡಿಯೋ ಇರುತ್ತದೆ. ಅವರು ಮನೆಯಲ್ಲೆ ಸಿನೆಮಾ ನೋಡುತ್ತಾರೆ. ಸಾಮಾನ್ಯ ಜನವೇ ಚಿತ್ರಮಂದಿರಗಳಲ್ಲಿ ಚಿತ್ರ ನೋಡುವುದು. ಸಾಮಾನ್ಯ ಜನರ ಮೇಲೆ ಮೇಲಿಂದ ಮೇಲೆ ಹೊರೆ ಬೀಳತಕ್ಕ ಪರಿಸ್ಥಿತಿಯನ್ನು ನಾವು ಉಂಟುಮಾಡಬಾರದು. ಆ ಹಿನ್ನೆಲೆಯಲ್ಲಿ ಈಗಾಗಲೇ ನಮ್ಮ ಹಿರಿಯ ನಾಯಕರು ಹೇಳಿರತಕ್ಕ ರೀತಿಯಲ್ಲಿ ಏನು ಒಂದಕ್ಕೆ ಎರಡರಷ್ಟು ತೆರಿಗೆಯನ್ನು ಹಾಕಿದ್ದೀರಿ ಅದು ಸರಿಯಾದುದಲ್ಲ. ಮಧ್ಯಮ ದರ್ಜೆ ಜನರಿಗೆ ಬೇರೆ ರೀತಿಯ ಮನರಂಜನೆ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿಯಾಗಲೀ, ಪಟ್ಟಣ ಪ್ರದೇಶಗಳಲ್ಲಿ ಯಾಗಲೀ ಏನಾದರೂ ಬೇಸರ ಆದರೆ ಸಿನೆಮಾಕ್ಕೆ ಹೋಗಬಹುದು ಮೊದಲು ನಾಟಕ, ಅದು ಇದು ನೋಡುತ್ತಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ನಾಟಕಗಳು ಯಾವುದೂ ಇಲ್ಲ. ಆವುಗಳು ನಡೆಯುತ್ತಿಲ್ಲ. ಏಕೆಂದರೆ ಎಲ್ಲರೂ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೆಲಸ ಮಾಡಿದರೂ ಒಂದು ಹೊತ್ತು ಊಟಕ್ಕೂ ಸಾಕಾಗುವುದಿಲ್ಲ. ಇನ್ನು ನಾಟಕ ನೋಡಿ ಮನೆಗೆ ಹೋಗಿ ಮಲಗಿಕೊಂಡರೆ ಅವರಿಗೆ ಕೂಳು ಇಲ್ಲ. ಮನುಷ್ಯ ದಣಿದು ಬಂದು ಬೇಜಾರು ಆದಾಗ ಮನರಂಜನೆಗಾಗಿ ಯಾವುದಾದರೂ ಸಿನೆಮಾಕ್ಕೆ ಹೋಗಬೇಕಾದರೆ ಎರಡು–ಮೂರು ರೂಪಾಯಿಗಳನ್ನು ಕೊಟ್ಟು ಹೋಗಬಹುದು. ಈಗಾಗಲೇ ಆ ಬೆಲೆಯೇ ಜಾಸ್ತಿಯಾಗಿದೆ. ಈ ರೀತಿ ಇರತಕ್ಕ ಸಂದರ್ಭದಲ್ಲಿ ಇನ್ನು ಹೆಚ್ಚು ತೆರಿಗೆ ಹಾಕಿದರೆ ಕೈಯಿಂದ ಕೊಡತಕ್ಕವರು ಯಾರು ? ಸಿನಿಮಾ ತಯಾರಕರು, ಸಿನಿಮಾ ಥಿಯೇಟರ್ ಮಾಲೀಕರು ಇವರು ಯಾರೂ ಕೊಡುವುದಿಲ್ಲ. ಇದು ಸಿನಿಮಾ ನೋಡತಕ್ಕವರ ಮೇಲೆಯೇ ಬೀಳತಕ್ಕ ಹೊರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈಗ ಏನು ಮನರಂಜನೆ ತೆರಿಗೆಯನ್ನು ಹೆಚ್ಚು ಮಾಡುವುದಕ್ಕೆ ನಮ್ಮ ಮುಂದಿಟ್ಟಿರತಕ್ಕ ಬಿಲ್ಲಾ ಏನು ಇದೆ ಇದನ್ನು ವಾಪಸ್ಸು ತೆಗೆದುಕೊಂಡು ಸಾಮಾನ್ಯ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಭೂಪತಿ (ಸೊಂಡೂರು).—ಮಾನ್ಯ ಅಧ್ಯಕ್ಷರೆ, ಶೋಟ್ಯಾಕ್ಸ್ ಬಗ್ಗೆ ಸಂಬಂಧಪಟ್ಟವರ ಅಭಿಪ್ರಾಯಗಳನ್ನು ಪಡೆದು ನಾವು ಜಾಸ್ತಿ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಈ ಮಸೂದೆಯನ್ನು ಮಂಡಿಸಿದಾಗ ಮಾನ ಮಂತ್ರಿಗಳು ಹೇಳಿದ್ದಾರೆ ಆದರೆ ಇನ್ನೊಂದು ಪ್ರಶ್ನೆ ಏನಿದೆ ಅಂದರೆ ಲೀಸಿಂಗ್ ಆಫ್ ಫ್ಯಿಚರ್ ಫಿಲಿಂಸ್‌ಗೆ ತೆರಿಗೆಯನ್ನು ಎಕ್ಸಮ್‌ಷನ್ಸ್ ಮಾಡಿರುವುದರಿಂದ ಇದನ್ನು ಜಾಸ್ತಿ ಮಾಡಿದ್ದೇವೆಂದರೆ ಹೇಗೆ ? ಕೆಲವರ ಅಭಿಪ್ರಾಯದ ಮೇಲೆ ತೆರಿಗೆಯನ್ನು ಎಕ್ಸಮ್‌ಷನ್ಸ್ ಮಾಡುವುದು, ಇನ್ನು ಕೆಲವರ ಅಭಿಪ್ರಾಯ ಪಡೆದು ತೆರಿಗೆಯನ್ನು ಜಾಸ್ತಿಮಾಡುವುದು ಒಟ್ಟಾರೆ ತೆರಿಗೆಯನ್ನು ಜಾಸ್ತಿ ಮಾಡುವ ಹುತಕ್ಕೆ ತಾವು ಹೊರಟಿದ್ದೀರಿ. ಮಾನ್ಯ ಶ್ರೀನಿವಾಸ್ ಮತ್ತು ವೊಯಿಲಿಯವರು ಈ ಸರ್ಕಾರ ತೆರಿಗೆಯನ್ನು ಹೆಚ್ಚು ಮಾಡತಕ್ಕದ್ದು ಒಂದು ನೀತಿಯಾಗಿದೆಯೆಂದು ಹೇಳಿದರು. ಅದು ಆಗಬಾರದು ನಿಜ. ಹಿಂದೆ ಆವರೆ ಸರ್ಕಾರ ಇದ್ದಾಗಲೂ ಅದನ್ನೆ ಮಾಡಿದ್ದಾರೆ, ಇವರೂ ಅದನ್ನೆ ಮಾಡಿದ್ದಾರೆ. ತೆರಿಗೆ ಕಡಿಮೆ ಮಾಡಬೇಕೆಂದರೆ ಏನು ಮಾಡುತ್ತಾರೆಂದರೆ, ೧ ರೂಪಾಯಿ ಟ್ಯಾಕ್ಸನ್ನು ಮೊದಲು ಹಾಕಿ ಆಮೇಲೆ ೫೦ ಪೈಸೆಗೆ ಇಳಿಸುತ್ತಾರೆ. ಒಟ್ಟಾರೆ ಪುನಃ ಅದು ಜಾಸ್ತಿಯಾಗುತ್ತದೆ. ಸಿನಿಮಾ ಕೈಗಾರಿಕೆ ಮನುಷ್ಯನಿಗೆ ಅತ್ಯಾವಶ್ಯಕವಾಗಿ ಮನರಂಜನೆಯ ಪ್ರಭಾವವನ್ನು ಬೀರತಕ್ಕ ಉದ್ಯಮ ಅದು ಆಗಿರುವುದರಿಂದ ಹೆಚ್ಚಿನ ಹೊರೆಯನ್ನು ಜನಸಾಮಾನ್ಯರ ಮೇಲೆ ಹೊರಡಿಸುವುದು ಸಾಧುವಲ್ಲ. ಸಿನಿಮಾ ಕೈಗಾರಿಕೆಯನ್ನು ಬೆಳಿಸುತ್ತೇನೆಂದು ಸಿನಿಮಾ ಮಾಧ್ಯಮಕ್ಕೆ ತೆರಿಗೆಯನ್ನು

ಹಾಕಿ ಜನ ಸಾಮಾನ್ಯರ ಮೇಲೆ ಪೆಚ್ಚಿನ ಹೊರೆಯನ್ನು ಹಾಕುವುದು. ಅಷ್ಟೆ ಅಲ್ಲದೆ ಮುಂದಿನ ಪೀಳಿಗೆಗೆ ಸಿನಿಮಾ ಮಾಧ್ಯಮ ಯಾವ ರೀತಿಯಿಂದಲೂ ಸಿಗಲಾರದ ಪರಿಸ್ಥಿತಿಯು ಬಂದಿತು. ಮನರಂಜನೆಯ ತೆರಿಗೆಯನ್ನು ಜಾಸ್ತಿ ಮಾಡಿರುವುದನ್ನು ವಿರೋಧಪಡಿ ನನಗೆ ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ್ (ಬಷ್ಮಾವರೆ).—ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಲನಚಿತ್ರಗಳ ಭವಿಷ್ಯ ಕರಾಳ ದಿನಗಳನ್ನು ಎದುರಿಸುತ್ತಿವೆಂದರೆ ತಪ್ಪಾಗಲಾರದು. ಕನ್ನಡ ನೆಲದಲ್ಲಿ ಕನ್ನಡ ಚಲನಚಿತ್ರಗಳನ್ನು ತಯಾರಿಸಿ, ಸಿನಿಮಾ ಮಂದಿರಗಳನ್ನು ಕಟ್ಟಿಸಿ ಆದರಿಂದ ಲಾಭದಾಯಕವಾಗಿ ನಡೆಸಿಕೊಂಡು ಹೋಗುವುದು ಬಹಳ ಕಷ್ಟಕರವಾದ ಪರಿಸ್ಥಿತಿ ಉದ್ಭವವಾಗಿದೆ ಇದು ತಮಗೆಲ್ಲರಿಗೂ ತಿಳಿದಿರುವಂತಹ ವಿಷಯ. ಇದೀಗ ವಂತ್ರೊಮ್ಮೆ ಮಾನ್ಯ ಮುಖ್ಯಮಂತ್ರಿಗಳು ಸಿನಿಮಾ ಮಂದಿರಗಳ ಮೇಲೆ ಶೋ ಟ್ಯಾಕ್ಸ್ ಅನ್ನು ಏರಿಸಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಸಿನಿಮಾ ಮಂದಿರಗಳ ಸ್ಥಿತಿಗೆ ಮಾರಕವಾದ ಪೆಟ್ಟನ್ನು ಕೊಟ್ಟಿರುತ್ತಾರೆ. ಪ್ರತಿಯೊಂದು ಶೋಗೂ ೪೦-೬೦-೧೦೦ ಈ ತರಹ ಏರಿಸಿದ್ದಾರೆ. ಏರಡು ಶೋ ನಡೆಸಿದರೆ ೮೦-೧೨೦-೨೦೦ ರೂಪಾಯಿ ಗಳನ್ನು ಕೊಡಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ದೈನಂದಿನ ಕಲೆಕ್ಷನ್ ಏನಿದೆ ಅದು ಕೂಡ ಅಷ್ಟು ಆಗುವುದಿಲ್ಲ ಆದೂ ಅಲ್ಲದೆ ಬೇರೆ ಮನರಂಜನೆಯ ಟ್ಯಾಕ್ಸ್ ಕೂಡ ಬರಂತ್ತದೆ. ಈಗಿರುವ ಪರಿಸ್ಥಿತಿಯಲ್ಲಿ ಇರುವ ಟ್ಯಾಕ್ಸ್‌ಗಳನ್ನು ಕೊಡಲಿಕ್ಕೆ ಸಾಧ್ಯವಿಲ್ಲದೆ ಇರುವ ಸಿನಿಮಾ ಮಂದಿರ ಗಳು ಇರುವಾಗ, ಇನ್ನೂ ಹೆಚ್ಚಿನ ಭಾರವನ್ನು ಅವುಗಳ ಮೇಲೆ ಹೊರಿಸಿರುವುದರಿಂದ ಅವರು ಈ ಉದ್ಯಮವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕೆಂದು ಚಿಂತೆಗೀಡಾಗಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಆಧ್ಯಕ್ಷರೇ, ಈ ಸಿನೆಮಾ ವಿಚಾರವಾಗಿ, ಮನ ರಂಜನೆ ತೆರಿಗೆ ವಿಷಯವಾಗಿ ಎಲ್ಲರಿಗೂ ಗೊತ್ತಿಲ್ಲ. ಆರು ರೂಪಾಯಿ ಟಿಕೆಟ್‌ನ್ನು ೨೦ ರೂಪಾಯಿಗೆ ಬ್ಲಾಕ್‌ನಲ್ಲಿ ಮಾರುತ್ತಿದ್ದಾರೆ. ಟಾಕೀಸಿನ ಮಾಲಿಕನೇ ಟಿಕೇಟುಗಳ ಪುಸ್ತಕವನ್ನು ತಮ್ಮ ಕೈಗೆ ತೆಗೆದು ಕೊಂಡು ಒಳ್ಳೆಯ ಸಿನೆಮಾಗಳು ಬಂದಾಗ ಪಾರಗಟ್ಟಲೆ ಬ್ಲಾಕ್‌ನಲ್ಲಿ ಟಿಕೇಟುಗಳನ್ನು ಆರೂ ರೂಪಾಯಿ ಇದ್ದರೆ ೨೦ ರೂಪಾಯಿಗೆ, ೩೦ ರೂಪಾಯಿಗೆ ಮಾರಾಟ ಮಾಡಿಸುತ್ತಾರೆ. ಆದ್ದರಿಂದ ನೀವು ಹಾಕುವ ಟ್ಯಾಕ್ಸ್ ಮನೋರಂಜನಾ ತೆರಿಗೆ ಎಂದು ಏನು ಹೇಳುತ್ತೀರಿ. ಇದರಿಂದ ಸಿನೆಮಾ ನೋಡುವುದಕ್ಕೆ ಯಾರು ಹೋಗುತ್ತಾರೆ ಅವರೇ ಇದನ್ನು ಹೊರಬೇಕಾಗಿ ಬರುತ್ತದೆ. ಆದ್ದರಿಂದ ಇದನ್ನ ವಿರೋಧಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯಿಲಿಯವರು ಮಂತ್ರಿ ಶ್ರೀ ಶ್ರೀನಿವಾಸ್ ಅವರು ಸಿನಿಮಾ ಉದ್ಯಮದ ಬಗ್ಗೆ, ಸಿನೆಮಾ ಮಾಧ್ಯಮದ ಬಗ್ಗೆ ಒಂದು ನೀತಿ ನಿಯಮವನ್ನು ನಿರೂಪಣೆ ಮಾಡಿ ಈ ಉದ್ಯಮದ ಬಗ್ಗೆ ಯೋಜನೆ ಮಾಡಬೇಕೆಂದು ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ. ಇದು ರಾಜ್ಯಸರ್ಕಾರಕ್ಕೆ ಸೀಮಿತವಾದ ವಿಷಯ ಅಲ್ಲವೆನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ ಎಂದೂ ನಾನು ಭಾವಿಸಿದ್ದೇನೆ. ಈ ವಿಚಾರದಲ್ಲಿ ಕೇಂದ್ರಸರ್ಕಾರದವರು ಮುಂಚೂಣಿಯಲ್ಲಿದ್ದು ಇದರ ಬಗ್ಗೆ ಯೋಚನೆ ಮಾಡಿ ನಮ್ಮಿಂದ ಸಲಹೆ ಸೂಚನೆಗಳೇನಾದರೂ ಇದ್ದರೆ ರಾಜ್ಯಸರ್ಕಾರದಿಂದ ಪಡೆದು ತದನಂತರ ಈ ಉದ್ಯಮಕ್ಕೆ ಯಾವುದು ಉಪಯೋಗಕರವಾದದ್ದು ಯಾವುದು ಸಾಧುವಾದುದು, ಯಾವುದು ಅಸಾಧುವಾದುದು ಎಂದು ಯೋಚನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ವಿಚಾರ ಆವರಿಗೆ ಗೊತ್ತಿದೆ. ಆದರೂ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. ಆಗಲಿ ಮಹಾಸ್ವಾಮಿ, ಚಿಂತನೆ ಮಾಡೋಣ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿಸ್ತಿದ್ದಾರೆ, ಕಲ್ಯಾಣ ಮಂಟಪ ಕಟ್ಟಿಸ್ತಿದ್ದಾರೆ. ನಿಜ, ನನ್ನ ಕ್ಷೇತ್ರದಲ್ಲೇ ಹೀಗೆ ಎರಡು ಕಡೆ ಆಗಿದೆ. ಇದನ್ನು ತಪ್ಪಿಸುವುದು ಹೇಗೆ? ಶ್ರೀ ವೆಂಕಟರಾಮಯ್ಯನವರು ಕಾನೂನು ಮಂತ್ರಿ ಗಳು ಈ ವಿಚಾರವಾಗಿ ಸಲಹೆ ಕೊಟ್ಟಿದ್ದಾರೆ ಎಂದು ಹೇಳಿದರು. ಇದು ಈಗಾಗಲೇ ಸಂವಿಧಾನದಲ್ಲಿ ಇದೆ. ಸಾರ್ವಜನಿಕರಿಂದ ಒತ್ತಡ ತಂದು ಇದನ್ನು ನಿಲ್ಲಿಸುವುದಕ್ಕೆ ತಾವೆಲ್ಲರೂ ಪ್ರಯತ್ನ ಮಾಡ ಬೇಕೆಂದು ಈ ಮಸೂದೆ ಬಂದಾಗ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಾನು ಹೇಳಿದ್ದೆ. ಮಾನ್ಯ ವೆಂಕಟರಾಮಯ್ಯನವರು ಇದನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದಾರೆ ಎಂದೂ ನಾನು ಭಾವಿಸಿದ್ದೇನೆ.

ಆಮೇಲೆ ಸನ್ಮಾನ್ಯ ವೆಂಕಟರಾಮ್ಯನವರು. ಈ ಥಿಯೇಟರುಗಳು ಸರ್ವನಾಶವಾಗಿ ಬಿಡುತ್ತದೆ. ಅನ್ಯಾಯ ಆಗಿಬಿಡುತ್ತದೆ ಎಂದು ಹೇಳಿದರು. ಸಿನೆಮಾ ಇಟ್ಟುಕೊಂಡಿರುವವರಿಗೆ ತೊಂದರೆ ಇರಬಹುದು. ನಾನು ಸಿನೆಮಾ ನೋಡುವುದಕ್ಕೇ ಹೋಗುವುದಿಲ್ಲ. ಇಷ್ಟವಿದ್ದರೆ ಕಾಸುಕೊಟ್ಟು ಹೋಗುತ್ತೇವೆ. ಇಲ್ಲದಿದ್ದರೆ ಮನೆಯಲ್ಲೇ ಇರುತ್ತೇನೆ. ಶೋಟ್ಯಾಕ್ಸ್ ಎನ್ನುವುದು ಪ್ರೇಕ್ಷಕರ ಮೇಲೆ ಪಾಸ್‌ಆನ್ ಮಾಡುವುದಕ್ಕೆ ಸಾಧ್ಯವಿಲ್ಲ. ಎಕ್ಸಿಬಿಟರ್ಸ್ ಮಾತ್ರ ಇದನ್ನು ಕೊಡತಕ್ಕದ್ದು ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ರೀತಿಯಾಗಿ ಬದಲಾವಣೆಗೆ ಒಪ್ಪಿಕೊಂಡವರು ಫಿಲ್ಮಂ ಚೇಂಬರ್ ಆಫ್ ಕಾಮರ್ಸ್‌ನವರು ಯಾರು ಈ ಉದ್ಯಮದಲ್ಲಿದ್ದಾರೆ, ಲೀಸಿಂಗ್ ಟ್ಯಾಕ್ಸ್‌ನ್ನು ತೆಗೆದುಹಾಕಿ ಈ ಹೆಚ್ಚಳವಾದ ಶೋ ಟ್ಯಾಕ್ಸ್‌ನ್ನು ಹಾಕಿ ಎಂದು ಯಾರು ಉದ್ಯಮದಲ್ಲಿದ್ದಾರೆ, ಅವರೇ ಹೇಳಿದ್ದಾರೆ. ಅವರೇ ಹೇಳಿರುವಾಗ, ಸನ್ಮಾನ್ಯ ವೆಂಕಟರಾಮಯ್ಯನವರು ಹೇಳುತ್ತಾರೆ ಇದು ಸರ್ವನಾಶ ಆಗಿಬಿಟ್ಟಿದೆ ಎಂದು. ಮಾತನಾಡಿ ಹೇಳುವ ಅಭಿಪ್ರಾಯಕ್ಕೆ ಒಂದು ಮಿತಿ ಇರಬೇಕು. ಮಾತಿಗೊಂದು ಅರ್ಥ ಇರಬೇಕು. ನಾವು ಏನಾದರೂ ಹೇಳಿದರೆ ವೆಂಕಟರಾಮಯ್ಯನವರಿಗೆ ಕೋಪ ಬರುತ್ತದೆ ನಾವು ಸಮಾಧಾನದಿಂದ ಕೇಳಿ ಕೊಂಡಿರಬೇಕಾಗುತ್ತದೆ, ಏಕೆಂದರೆ ಅವರು ನಮ್ಮ ಜಿಲ್ಲೆಯವರು ನಾನು ಮಾತ್ರ ಕೋಪ ಮಾಡಿಕೊಳ್ಳಬಾರದು. ಸರ್ಕಾರಕ್ಕೆ ಆದಾಯಬೇಕು. ನಾನು ಒಪ್ಪಿಕೊಳ್ಳುತ್ತೇನೆ. ಏನು ಹಿಂದಿನ ಸರ್ಕಾರದವರು ಟ್ಯಾಕ್ಸ್ ಹಾಕಿದರು, ನೀವು ಹಾಕುತ್ತೀರಿ ಎಂದು ಹೇಳುತ್ತಾರೆ. ಆದರೆ ನಾವು ಎಲ್ಲಿ ಸೂಟಿ ಬಿಟ್ಟಿದ್ದೇವೆ. ಆದಕ್ಕೆ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಅವರು ಹೇಳಲಿಲ್ಲ. ಇಪರ ಸರ್ಕಾರ ಬಂದರೆ ತೆರಿಗೆ ಇಲ್ಲದೇ ಇರತಕ್ಕಂಥ ಸರ್ಕಾರವನ್ನು ಈ ದೇಶದಲ್ಲಿ, ರಾಜ್ಯದಲ್ಲಿ ಸ್ಥಾಪನೆ ಮಾಡುತ್ತೇವೆ ಎಂದು ಘೋಷಣೆ ಮಾಡಿ ಇವರ ಪಾರ್ಟಿಯನ್ನು ಅಧಿಕಾರಕ್ಕೆ ತಂದರೆ ನಾನು ಬಹಳ ಸಂತೋಷದಿಂದ ಬೆಂಬಲ ಕೊಡುತ್ತೇನೆ ಸ್ವಾಮಿ. ಅಲ್ಲಿಯವರೆಗೆ ಅವರು ಸಮಾಧಾನವಾಗಿರಬೇಕು ಎಂದು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ರಿಪೀಲಿನೇ ಇಸವಿಯ ಕರ್ನಾಟಕ ಮನರಂಜನೆಗಳ ತೆರಿಗೆ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನು ಪರ್ಯಾಲೋಚಿಸುವುದು

ಖಂಡ : ೨

ಅಧ್ಯಕ್ಷರು.—''ಖಂಡ ೨ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ : ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ಹಾಗೂ ನಗರಾಭಿವೃದ್ಧಿ ಮತ್ತು ಆಹಾರ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ).—ರಿಪೀಲಿನೇ ಇಸವಿಯ ಕರ್ನಾಟಕ ಮನರಂಜನೆಗಳ ತೆರಿಗೆ (ಮೂರನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ಮನರಂಜನೆಗಳ ತೆರಿಗೆ ಮೂರನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮೋದನೆಗೆ ಒಪ್ಪಿಗೆ ನೀಡಲಾಯಿತು.

೧೯೮೭ನೇ ಇಸವಿಯ ಕರ್ನಾಟಕ ವಿಧಾನಮಂಡಲದ ಸದಸ್ಯರ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ನಗರಾಭಿವೃದ್ಧಿ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಮಂಡಲದ ಸದಸ್ಯರ ಸಂಬಳ, ನಿವೃತ್ತಿ ವೇತನ, ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, ೧೯೮೭ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ವ್ಯವಹಾರಗಳು, ನಗರಾಭಿವೃದ್ಧಿ. ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ವಿಧಾನಮಂಡಲದ ಸದಸ್ಯರ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ ತಿದ್ದುಪಡಿ ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ, ನಗರಾಭಿವೃದ್ಧಿ ಹಾಗೂ ಆಹಾರ ಸಚಿವರು)—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, ೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ, ನಗರಾಭಿವೃದ್ಧಿ ಹಾಗೂ ಆಹಾರ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.